ಕರ್ನಾಟಕ ಸರ್ಕಾರ

ಸಂ:ಗ್ರಾಅಪ/96/ಗ್ರಾನೀಸ(6)2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:30.04.2014

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ,
ಆನಂದರಾವ್ ವೃತ್ತ, ಬೆಂಗಳೂರು-09.
2. ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ : NRDWP ಕೇಂದ್ರ ಮತ್ತು ರಾಜ್ಯ ವಲಯಗಳಡಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳ ಬಿಲ್ ಪಾವತಿ ಮಾಡುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಸಮಸಂಖ್ಯೆ ಪತ್ರ, ದಿನಾಂಕ:29.03.2014.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **NRDWP**ಯಡಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ **2013-14**ರ ಸಾಲಿಗೆ ಲಭ್ಯವಿದ್ದ OB ಅನುದಾನ ಸೇರಿ ಒಟ್ಟಾರೆ ಬಿಡುಗಡೆ ಮತ್ತು ವೆಚ್ಚವನ್ನು ಯೋಜನಾವಾರು / ಘಟಕವಾರು ವಿವರಗಳನ್ನು IMISನಲ್ಲಿ ಇಂದೀಕರಿಸಲು ಕ್ರಮವಹಿಸಬೇಕು. **2013-14**ರ ಸಾಲಿನ ಆರ್ಥಿಕ ಸಾಲಿನ ಅಂತ್ಯಕ್ಕೆ ಬ್ಯಾಂಕ್ ದಾಖಲೆಗಳನ್ವಯ ವೆಚ್ಚವನ್ನು IMISನಲ್ಲಿ ನಮೂದಿಸಲು ಆಯಾ PRED ವಿಭಾಗಳು ಕ್ರಮವಹಿಸಬೇಕು. ಬ್ಯಾಂಕ್ ಮತ್ತು IMIS ದಾಖಲೆಯನ್ವಯ ವೆಚ್ಚದ ಮಾಹಿತಿಯು ಒಂದೇ ತೆರನಾಗಿರಬೇಕು ಯಾವುದೇ ಕಾರಣಕ್ಕೂ ವೆಚ್ಚದ ಮಾಹಿತಿಯಲ್ಲಿ ವ್ಯತ್ಯಾಸವಿರಬಾರದು. ದಿನಾಂಕ:29.03.2014ರಂದು ರೂ.82.00ಕೋಟಿ ಮರು ಹಂಚಿಕೆ ಮಾಡಲಾದ ಅನುದಾನವನ್ನು ಹಿಂಪಡೆದು / ಪರಿಷ್ಕರಿಸಿ **ರೂ.2053.80ಲಕ್ಷ ಮತ್ತು ರೂ.1150.00ಲಕ್ಷಗಳಿಗೆ 2 ಪ್ರತ್ಯೇಕ ಆದೇಶಗಳಲ್ಲಿ** / ಪತ್ರಗಳಲ್ಲಿ ಘಟಕವಾರು ಸೀಮಿತಗೊಳಿಸಿ ಮರು ಹಂಚಿಕೆ ಮಾಡಲಾಗಿದೆ. ಅದರಂತೆ, ಜಿಲ್ಲಾವಾರು ಅನುದಾನವನ್ನು ಅಪ್‌ಲೋಡ್ ಮಾಡಿ ವೆಚ್ಚ ಭರಿಸಬೇಕು.

**2014-15**ರ ಸಾಲಿಗೆ **ರೂ.176.55ಕೋಟಿ** ಹಾಗೂ **ರೂ.100.00ಕೋಟಿ**ಯನ್ನು NRDWP – MNP ರಾಜ್ಯ ವಲಯದಡಿ ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು **2014-15**ರ ಸಾಲಿನಲ್ಲಿ **IMIS**ನಲ್ಲಿ ಅಪ್‌ಲೋಡ್ ಮಾಡಿ ವೆಚ್ಚ ಭರಿಸಲು ಕೂಡಲೇ ಕ್ರಮವಹಿಸಬೇಕು.

ಸಿಂಡಿಕೇಟ್ ಬ್ಯಾಂಕ್, ಅದರಂತೆ, **2013-14** ಹಾಗೂ **2014-15**ರ ಸಾಲಿನಲ್ಲಿ ಆಯಾ ಘಟಕವಾರು ಮತ್ತು ಜಿಲ್ಲಾವಾರು ಲಭ್ಯವಾಗಿರುವ ಅನುದಾನದಂತೆ ಬಾಕಿ ಇರುವ ಬಿಲ್ಲುಗಳನ್ನು ಮಾನ್ಯ ಮಾಡಲು ಅಗತ್ಯ ಕ್ರಮವಹಿಸಬೇಕು. ಯಾವುದೇ ಕಾರಣಕ್ಕೂ ಬಾಕಿ ಬಿಲ್ ಪಾವತಿಗೆ ತೊಂದರೆಯಾಗದಂತೆ ಕ್ರಮವಹಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್:**rk3452000@gmail.com**
ಫೋನ್:**22032806**, ಫ್ಯಾಕ್ಸ್:**22203175**

ಪ್ರತಿ:

ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, BWSSB Branch, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರುರವರ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.